**ಸಾಕ್ಷಿಯನ್ನು ಕರೆಸಲಾಯಿತು** **ಪ್ರಮಾಣ ವಚನ ಮಾಡಿಸಲಾಯಿತು**

**ದಿ:30-08-2024**

ಮುಂದುವರೆದ **ಪಾಟೀ ಸವಾಲು: ದೂರುದಾರರ ಪರ ಶ್ರೀ ಎಂ ಹೆಚ್ ಎಂ ವಕೀಲರಿಂದ**

ಒಂದು ಲಕ್ಷ 10 ಸಾವಿರ ಹಣವನ್ನು ಮರುಪಾವತಿ ಮಾಡಿದ ಬಗ್ಗೆ ದಾಖಲಾತಿ ಮಾಡಿಕೊಂಡಿರುವುದಿಲ್ಲ. ಅಕೌಂಟ್ ಮೂಲಕ ಕೊಟ್ಟಿರುವುದರಿಂದ ದಾಖಲಾತಿ ಮಾಡಿಕೊಂಡಿರುವುದಿಲ್ಲ. ದೂರುದಾರರಿಂದ 1,10,000/- ಹಣವನ್ನು ಪಡೆದುಕೊಂಡಿರುವ ಬಗ್ಗೆ ಅವರಿಂದ ದಾಖಲಾತಿ ಪಡೆದುಕೊಳ್ಳಲು ತೊಂದರೆ ಇರಲಿಲ್ಲ. 2018 ರಲ್ಲಿ ನಾನು 1,10,000/- ಸಾಲ ಪಡೆದ ಹಣಕ್ಕೆ ನಿಪಿ-1 ಚೆಕ್ಕನ್ನೇ ನೀಡಿರುತ್ತೇನೆ. ಆ ಸಮಯದಲ್ಲಿ ಯಾವುದೇ ಬರವಣಿಗೆ ಮಾಡಿಕೊಂಡಿರುವುದಿಲ್ಲ. ಸಾಲಕ್ಕಾಗಿ ಭದ್ರತೆಗಾಗಿ ನಾನು ನಿಪಿ-1 ಚೆಕ್ಕನ್ನು ನೀಡಿರುತ್ತೇನೆ. ದೂರುದಾರರು ಸಹಿ ಮಾಡದೇ ಖಾಲಿ ಚೆಕ್ಕನ್ನೇ ಕೇಳಿದ್ದರಿಂದ ನಾನು ಖಾಲಿ ಚೆಕ್ಕನ್ನು ಭದ್ರತೆಗಾಗಿ ನೀಡಿರುತ್ತೇನೆ. ನಾನು 4,50,000/- ಹಣವನ್ನು ಮರುಪಾವತಿ ಮಾಡುವುದನ್ನು ತಪ್ಪಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಚೆಕ್ಕನ್ನು ವಾಪಸ್ಸು ಕೇಳಲು ಹೋದಾಗ ಪದೇ ಪದೇ ದೂರುದಾರರು ತೊಂದರೆ ನೀಡುತ್ತಿರುವ ಬಗ್ಗೆ ಯಾವುದೇ ದೂರನ್ನು ದಾಖಲು ಮಾಡಿರುವುದಿಲ್ಲ. ನನಗೆ ಗೊತ್ತಾಗದೇ ಇರುವುದರಿಂದ ದೂರು ದಾಖಲು ಮಾಡಿರುವುದಿಲ್ಲ. ಭಾರತಿ ಕೋಂ ಬಿ ಡಿ ದಿನೇಶ, ಬನಾಲು ಗ್ರಾಮ, ಹಾನುಬಾಳು ಹೋಬಳಿ, ಸಕಲೇಶಪುರ ತಾಲ್ಲೂಕು ಎಂದರೆ ನನ್ನ ಖಾಯಂ ವಿಳಾಸ ಆಗಿರುತ್ತದೆ. ನಮ್ಮ ಊರಿನಲ್ಲಿ ಭಾರತಿ ಕೋಂ ದಿನೇಶ್ ಎಂಬುವರು ನನ್ನನ್ನು ಬಿಟ್ಟು ಬೇರೆ ಯಾರೂ ಇರುವುದಿಲ್ಲ. ನಾನು ನಾಲ್ಕೂವರೆ ಲಕ್ಷ ಹಣ ಮರುಪಾವತಿ ಮಾಡಲು ನಿಪಿ-1 ಅನ್ನು ನೀಡಿದ್ದರೂ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕು ನನ್ನ ಖಾತೆಗೆ ಸಂಬಂಧಪಟ್ಟ ಚೆಕ್ ಆಗಿರುತ್ತದೆ ಎಂದರೆ ಸರಿ. ನಿಪಿ-1 ಚೆಕ್ಕಿಗೆ ನಾನೇ ಸಹಿ ಮಾಡಿ ದೂರುದಾರರಿಗೆ ನೀಡಿದ್ದರೂ ಸಹ ಬ್ಯಾಂಕಿನವರೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರರಿಗೆ ನಾನು ನಾಲ್ಕೂವರೆ ಲಕ್ಷ ಹಣ ಕೊಡಲು ಬಾದ್ಯಸ್ಥಳಾಗಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಪ್ರಭಾರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ